ನೀನು ಇವರಿಬ್ಬರನ್ನು ಪೊರೆದುಕೋ. ಅಧರ್ಮಕ್ಕೆ ಮನಸ್ಸು ಮಾಡಬೇಡ' ಎಂದ.

ಹೀಗೆ ಹೇಳಿ, ಕೃಷ್ಣ ಬಲರಾಮ ಮುಂತಾಗಿ ಗತಿಸಿದವರಿಗೆಲ್ಲಾ ತಿಥಿ ಮಾಡಿ ಉಳಿದವರಿಗೆ ಹೇಳಿ ಹೊರಟ.

ಆಮೇಲೆ ಪಟ್ಟಣದ ಜನ, ಹಳ್ಳಿಯ ಜನ ಎಲ್ಲರನ್ನೂ ಕರೆದು ಹೇಳಿದ. ಅವರು ದುಃಖದಲ್ಲಿ ಉಮ್ಮಳಿಸಿದರು. ಯಾರೂ ಒಪ್ಪಲಿಲ್ಲ. ಹಾಗೆ ಮಾಡುವುದು ಸರಿಯಲ್ಲ ಎಂದರು. ಇವನಿಗೆ ಕಾಲದ ಹೊರಳಾಟ, ಕಾಲದ ಧರ್ಮ ಎಂಬುದು ಗೊತ್ತು. ಅವರ ಮಾತನ್ನು ಒಪ್ಪಲಿಲ್ಲ. ತಮ್ಮಂದಿರ ಜತೆ ಹೊರಡುವುದು ಎಂದು ಮನಸ್ಸು ಮಾಡಿದ.

ಆಮೇಲೆ, ಕುರುಕುಲದ ರಾಜ ಧರ್ಮರಾಯ ತನ್ನ ಮೈಯಿಂದ ಒಡವೆಗಳನ್ನು ಕಳಚಿ ಇಟ್ಟ. ನಾರು ಬಟ್ಟೆ ಉಟ್ಟ. ಭೀಮ, ಅರ್ಜುನ, ಸಹದೇವ, ಯಶಸ್ವಿನಿಯಾದ ದ್ರೌಪದಿ ಎಲ್ಲರೂ ಹೀಗೆಯೇ ಮಾಡಿದರು. ಕೊನೆಯ ದಿನ ನಿತ್ಯದ ಅಗ್ನಿಹೋತ್ರ ಮಾಡಿದರು. ಎಲ್ಲರೂ ತಂತಮ್ಮ ಅಗ್ನಿಯನ್ನು ನೀರೊಳಗೆ ತೂರೆದರು.

'ಜೂಜಿನಲ್ಲಿ ಸೋತಾಗ ಹೇಗಿದ್ದರೋ ಈಗ ಅದೇ ಥರ ಆಗಿಬಿಟ್ಟಿದಾರೆ' ಎಂದು ಹೆಂಗಸರು ಅವರನ್ನು ನೋಡಿ ಶೋಕ ಮಾಡುತ್ತಾ ಇದ್ದರು.

ಅಣ್ಣ ತಮ್ಮಂದಿರು ಐದು ಜನ, ಆರನೆಯವಳು ದ್ರುಪದನ ಮಗಳು, ಏಳನೆಯದು ನಾಯಿ. ಆದರೆ ರಾಜನೇ ತನ್ನನ್ನು ಏಳನೆಯವನು ಎಂದುಕೊಂಡು ಹಸ್ತಿನಾಪುರವನ್ನು ಹಿಂದಕ್ಕೆ ಹಾಕಿ ಹೊರಟ.

ಜನ, ಅಂತಃಪುರ ಎಲ್ಲವೂ ಅವರ ಹಿಂದೆ ಹೊರಟಿತು. ಅವರನ್ನು ಬರಬೇಡಿ ಎಂದು ಇವರಿಗೆ ಹೇಳಲಾಗಲಿಲ್ಲ. ಆ ಜನರೂ ಹಿಂದಿರುಗಿದರು ಕೃಪ, ಯುಯುತ್ಸುವಿನ ಜತೆ. ಚಿತ್ರಾಂಗದೆ ಮಣಿಪುರಕ್ಕೆ ಹೋದಳು. ಉಲೂಪಿಸರ್ಪರಾಜನ ಮಗಳುಗಂಗೆಯನ್ನು ಹೊಕ್ಕಳು. ಪರೀಕ್ಷಿತನ ಜತೆ ಮಿಕ್ಕ ತಾಯಂದಿರು ಉಳಿದುಕೊಂಡರು.

ಆಮೇಲೆ ಪಾಂಡುವಿನ ಮಕ್ಕಳು, ಮತ್ತೆ ದ್ರೌಪದಿ ಇಷ್ಟು ಜನ ಉಪವಾಸ ಮಾಡಿ ಮೂಡಲ ಮೊಗವಾಗಿ ನಡೆದರು. ಯೋಗ ಕೂಡಿದವರು ಅವರು. ಎಷ್ಟೋ ದೇಶ ಎಷ್ಟೋ ಹೊಳೆ ಎಷ್ಟೋ ಕಡಲು ದಾಟಿಕೊಂಡು ಹೊರಟರು. ಮುಂದೆ ಯುಧಿಷ್ಠಿರ, ಅವನ ಹಿಂದೆ ಭೀಮ, ಆಮೇಲೆ ಅರ್ಜುನ, ಅವನ ಬೆನ್ನಿಗೆ ನಕುಲ, ಸಹದೇವ. ಎಲ್ಲರಿಗೂ ಹಿಂದೆ ಆ ಕಪ್ಪು ಚೆಲುವೆ, ತಾವರೆ ಕಣ್ಣಿನವಳು, ಹೆಣ್ಣುಗಳಲ್ಲೇ ಮೇಲಾದ ದ್ರೌಪದೀ. ಇವರ ಹಿಂದೆ ಒಂದು ನಾಯಿ, ಕಾಡಿನಲ್ಲಿ ಇವರನ್ನು ಅನುಸರಿಸಿ ಬಂತು.

ನಿಧಾನಕ್ಕೆ ಇವರು ಕೆಂಪು ಕಡಲಿನ ಬಳಿ ಬಂದರು. ಅರ್ಜುನನ ಕೈಯಲ್ಲಿ ಗಾಂಡೀವ, ಅಕ್ಷಯ ಬತ್ತಳಿಕೆ ಇನ್ನೂ ಇತ್ತು. ರತ್ನದ ಲೋಭದಿಂದ ಅದನ್ನವನು ಎಸೆದಿರಲಿಲ್ಲ. ಇವರ ದಾರಿಗೆ ಅಡ್ಡವಾಗಿ ಬೆಟ್ಟದಾಕಾರದಲ್ಲಿ ಅಗ್ನಿಪುರುಷ ನಿಂತಿದ್ದ.

'ಪಾಂಡವರೇ ನಾನು ಅಗ್ನಿ. ಅರ್ಜುನ ನಾರಾಯಣರ ಮಹಿಮೆಯಿಂದ ಖಾಂಡವವನವನ್ನು ಸುಟ್ಟವನು ನಾನೇ. ಆ ಗಾಂಡೀವವನ್ನು ಫಲ್ಗುಣ ಇಲ್ಲಿ ತೊರೆದು ಹೋಗಲಿ. ಇನ್ನೇಕೆ ಅದು? ನಾನು ಅದನ್ನ ವರುಣನಿಂದ ಈಸಿಕೊಂಡು ಬಂದಿದ್ದೆ. ಮರಳಿ ಕೊಡಬೇಕು' ಎಂದ. ಸೋದರರು ಅರ್ಜುನನಿಗೆ ಎಸೆದು ಬಿಡು ಎಂದರು. ಅರ್ಜುನ ಬಿಲ್ಲು ಬತ್ತಳಿಕೆ ಎರಡನ್ನೂ ನೀರಿಗೆ ಹಾಕಿದ. ಅಗ್ನಿ ಮರೆಯಾಗಿ ದಾರಿ ಬಿಟ್ಟ. ಆಮೇಲೆ ಕಡಲು ಬಳಸಿ ತೆಂಕಲ ಕಡೆಗೆ ನಡೆದರು. ಆಮೇಲೆ ಪಡುವಲ ಕಡೆಗೆ. ಅಲ್ಲಿ ದ್ವಾರಕೆ ಮುಳುಗಿಯೇ ಹೋಗಿತ್ತು. ಮತ್ತೆ ಬಡಗಲಿಗೆ ತಿರುಗಿದರು, ಭೂಮಿಗೇ ಪ್ರದಕ್ಷಿಣೆ ಮಾಡುವವರ ಹಾಗೆ. ಆ ಯೋಗವಂತರು ನಡೆಯುತ್ತಾ ನಡೆಯುತ್ತಾ ಹಿಮವಂತ ಪರ್ವತ ಕಂಡರು. ಅದನ್ನೂ ದಾಟಿದರು. ವಾಲುಕರ್ಣ ಕಾಣಿಸಿತು. ಅಲ್ಲಿಂದ ಕೋಡುಮಲೆಗಳ ತುದಿ ಎನಿಸುವ ಮಹಾ ಪರ್ವತ ಮೇರು.

ಯೋಗಧರ್ಮಿಗಳು ಅವರು ಸರಸರ ಮೇಲೆ ಮೇಲೆ ಹತ್ತಿದರು ಯಾಜ್ಞಸೇನಿಗೆ ಯೋಗ ಜಾರಿತು. ಭೂಮಿಗೆ ಬಿದ್ದಳು.

ಹಾಗೆ ಬೀಳುತ್ತಾ ಇರುವ ಅವಳನ್ನು ನೋಡಿ ಮಹಾಬಲ ಭೀಮಸೇನ 'ಅಣ್ಣಾ ಅಲ್ಲಿ ನೋಡು, ಯಾಜ್ಞಸೇನೀ. ಅವಳು ಅಧರ್ಮ ಮಾಡಿದವಳೇ ಅಲ್ಲ. ಅವಳು ಯಾಕೆ ಬಿದ್ದಳು? ಆ ಕೃಷ್ಣ?'

'ಅವಳು ಸಿಕ್ಕಾಪಟ್ಟೆ ಪಕ್ಷಪಾತ ಮಾಡುತಿದ್ದಳು. ಅದರಲ್ಲೂ ಅರ್ಜುನನ ವಿಷಯಕ್ಕೆ, ಅದರ ಫಲ ಉಣ್ಣುತಿದ್ದಾಳೆ' ಎಂದು ಹೇಳಿ ಅವಳ ಕಡೆ ನೋಡಲೇ ಇಲ್ಲ, ಮುಂದೆ ನಡೆದ ಧರ್ಮಾತ್ಮ. ಆಮೇಲೆ, ಆ ಎಲ್ಲ ತಿಳಿದವನು ಸಹದೇವ ಬಿದ್ದ.

'ಅಣ್ಣಾ, ಒಂದು ಚೂರೂ ಜಂಬ ಇಲ್ಲದೆ ನಮ್ಮ ಸೇವೆ ಮಾಡಿದ. ಅಂಥವನು ಈ ಮಾದ್ರೀ ಮಗ, ಅವನೇಕೆ ಕೆಳಕೆ ಕುಸಿದ?

'ತನಗಿಂತ ತಿಳಿದವರೇ ಲೋಕದಲ್ಲಿ ಇಲ್ಲ ಅಂದುಕೊಂಡಿದ್ದ. ಆ ಐಬಿನಿಂದ ಬಿದ್ದ.' ಹೀಗೆಂದು ಸಹದೇವನನ್ನು ತೊರೆದುಕೊಂಡು, ಉಳಿದವರ ಜತೆ ಮುಂದೆ ನಡೆದ. ಕೃಷ್ಣೆ ಬಿದ್ದಳು, ಸಹದೇವ ಬಿದ್ದ, ಇದನ್ನು ಕಂಡು ಆರ್ತನಾಗಿ ನಕುಲ ಬಿದ್ದ ನೋಡುವುದಕ್ಕೆ ಚಂದವಿದ್ದ ಅವನು ಬಿದ್ದದ್ದು ನೋಡಿ ಭೀಮ 'ಇವನ ಧರ್ಮ ಎಂದೂ ಮುಕ್ಕಾಗಿರಲಿಲ್ಲ. ಮಾತನ್ನು ಮೀರಿದವನಲ್ಲ. ಇಂಥ ರೂಪವಂತ ಜಗತ್ತಿನಲ್ಲೇ ಇಲ್ಲ. ಇವನೇಕೆ ಬಿದ್ದ?'

'ರೂಪದಲ್ಲಿ ತನಗೆ ಸಮನಿಲ್ಲ ಎಂದು ತಿಳಿದದ್ದೇ ಅವನ ಐಬು. ತಾನೊಬ್ಬನೇ ರೂಪವಂತ ಎನ್ನುವ ಜಂಬ ಅವನ ಮನಸ್ಸಿನಲ್ಲಿ ಕೂತಿತ್ತು. ಅದಕ್ಕೇ ಬಿದ್ದ. ನಿನ್ನ ಪಾಡಿಗೆ ನೀನು ಬಾ ವೃಕೋದರಾ. ಯಾರಿಗೆ ಯಾವುದು ಆಗಬೇಕೋ ಅದು ಆಗಿಯೇ ತೀರುತ್ತದೆ.'

ಹೀಗೆ ಮೂರು ಜನ ಬಿದ್ದದ್ದು ನೋಡಿ ದುಃಖದಲ್ಲಿ ಬೇಯುತ್ತಾ ಅರ್ಜುನ ಬಿದ್ದ. ಆ ಗಂಡು ಹುಲಿ, ಇಂದ್ರನ ತೇಜಸ್ಸಿನವನು, ಮೆಟ್ಟಲಾಗದವನು, ಸತ್ತವನ ಹಾಗೆ ಬಿದ್ದದ್ದು ಕಂಡು, ಭೀಮ 'ಇಷ್ಟ ಬಂದಂತೆ ನಡೆಯುವರಲ್ಲೂ ಇಷ್ಟೊಂದು ಸತ್ಯವಾದಿಯನ್ನು ನಾನು ಕಾಣೆ. ಸುಳ್ಳು ಹೇಳಿದವನೇ ಅಲ್ಲ. ಯಾವ ವಿಕಾರ ಇವನನ್ನು ಕೆಳಕ್ಕೆ ಬೀಳಿಸಿತು.'

'ಒಂದೇ ಹಗಲಲ್ಲಿ ಶತ್ರುಗಳನ್ನು ಸುಟ್ಟು ಹಾಕತೀನಿ ಅಂದ. ಹಾಗೆ ಮಾಡಲಿಲ್ಲ. ಅದಕ್ಕೇ ಬಿದ್ದ. ಬಿಲ್ಲುಗಾರರನ್ನೆಲ್ಲ ಅವಮಾನ ಮಾಡುತಿದ್ದ. ದೊಡ್ಡವನಾಗಬೇಕು ಅಂದರೆ ಹೀಗೆಲ್ಲ ಮಾಡಬಾರದು'.

ಮುಂದುವರೆದರು. ಈಗ ಭೀಮನೇ ಬಿದ್ದ. ಬೀಳುತ್ತಿರುವಾಗಲೇ ಭೀತಿಗೊಂಡು ಕೇಳಿದ 'ನೋಡು, ನಾನೇ ಬಿದ್ದೆ. ಯಾಕೆ ಬಿದ್ದೆ ಅಂತ ಗೊತ್ತಿದ್ದರೆ ಹೇಳು.'

'ಮಿತಿ ಮೀರಿ ತಿಂದೆ. ಬೇರೆಯವರನ್ನು ಲೆಕ್ಕಕ್ಕಿಟ್ಟುಕೊಳ್ಳದೆ ನಿನ್ನ ಮೈ ಬಲದ ಬಗೆ ಕೊಚ್ಚಿಕೊಳ್ಳುತ್ತಿದ್ದೆ, ಅದರಿಂದ ಬಿದ್ದೆ.'

ವೈಶಂಪಾಯನ: ಹೀಗಂದವನು ತಿರುಗಿ ನೋಡಲೇ ಇಲ್ಲ. ಮುಂದಕ್ಕೆ ನಡೆದ. ಅವನ ಹಿಂದೆ ನಾಯಿಯೊಂದೇ ಬಂತು. ಆ ನಾಯಿ ಬಗ್ಗೆ ನಿನಗೆ ಸಾಕಷ್ಟು ಹೇಳಿದೇನಲ್ಲವಾ ಜನಮೇಜಯಾ? ■

